# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ:+91-80-2226 0017;+91-80-2226 7470;+91-80-2226 1047 ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.org

ಸಂಖ್ಯೆ:SHQ/Summer Camp/2311 /2025-26 ದಿನಾಂಕ:25.02.2026

ಜಿಲ್ಲಾ ಕಾರ್ಯದರ್ಶಿ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಜಿಲ್ಲಾ ಸಂಸ್ಥೆ, ಕರ್ನಾಟಕ

ಮಾನ್ಯರೆ,

ವಿಷಯ:- 2026ನೇ ಸಾಲಿನಲ್ಲಿ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಮಾರ್ಚ್ ತಿಂಗಳಿಂದ ಮೇ 2026ರ ವರೆಗೆ **ಬೇಸಿಗೆ ಶಿಬಿರವನ್ನು** ಸಂಘಟಿಸುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ರಾಜ್ಯ ಸಂಸ್ಥೆಯು ಈಗ್ಗೆ 6 ವರ್ಷಗಳಿಂದ ಈ ವಿಶೇಷ ಬೇಸಿಗೆ ಶಿಬಿರಗಳನ್ನು ಸಂಘಟಿಸುತ್ತಿರುವುದು ಸಂತೋಷದ ವಿಷಯವಾಗಿದೆ. ಅದೇ ರೀತಿ 2026ನೇ ಸಾಲಿನಲ್ಲಿ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್ ಎಲ್ಲಾ ವಿಭಾಗಗಳಿಗೆ ಬೇಸಿಗೆ ಶಿಬಿರವನ್ನು ದಳ ಮಟ್ಟದಿಂದ ಸ್ಥಳೀಯ ಮತ್ತು ಜಿಲ್ಲಾ ಹಂತದ ವರೆಗೆ ಮಾರ್ಚ್ ತಿಂಗಳಿಂದ ಮೇ 2026ರ ವರೆಗೆ ಸಂಘಟಿಸಲು ಕೋರಲಾಗಿದೆ. ದಳ ಮಟ್ಟದಲ್ಲಿ/ಶಾಲಾ/ಕಾಲೇಜು ಮಟ್ಟದಲ್ಲಿ ಅಥವಾ 2-3 ದಳಗಳು ಸೇರಿ ತಮ್ಮ ತಮ್ಮ ಸಮುದಾಯಗಳಲ್ಲಿ, ಅನುಕೂಲಕ್ಕೆ ತಕ್ಕಂತೆ ಈ ಬೇಸಿಗೆ ಶಿಬಿರವನ್ನು ಆಯೋಜಿಸಬಹುದು. ಬೇಸಿಗೆ ಶಿಬಿರವನ್ನು **2026ರ ಮಾರ್ಚ್ ಅಂತ್ಯದಿಂದ ಮೇ ಅಂತ್ಯದ ಒಳಗಾಗಿ ದಿನ ಒಂದಕ್ಕೆ 5 ಗಂಟೆಗಳ ಅವಧಿಗೆ ಕನಿಷ್ಠ 5 ದಿನಗಳು ಗರಿಷ್ಠ 7 ದಿವಸಗಳ ಅವಧಿಯಲ್ಲಿ ತಮಗೆ ಅವಕಾಶವಿದ್ದಷ್ಟು ಬೇಸಿಗೆ ಶಿಬಿರವನ್ನು** ಸಂಘಟಿಸುವುದು.

ಈ ಬೇಸಿಗೆ ಶಿಬಿರದಲ್ಲಿ ಭಾಗವಹಿಸುವ ಪ್ರತಿ ವಿದ್ಯಾರ್ಥಿಗಳಿಂದ **ತಲಾ ರೂ.50/-ಗಳನ್ನು ನೊಂದಾವಣಿ ಶುಲ್ಕವಾಗಿ** ಸಂಗ್ರಹಿಸಲು ಅವಕಾಶ ಇರುವುದು. ಈ ನೊಂದಾವಣಿ ಶುಲ್ಕದ ಮೊತ್ತವನ್ನು ಆಯಾಯ ಶಾಲೆಯ ದಳನಾಯಕರುಗಳು ಸಂಗ್ರಹಿಸಿ, ಸದರಿ ಮೊತ್ತವನ್ನು ಮಕ್ಕಳಿಗೆ ಲಘುಉಪಹಾರ, ಜ್ಯೂಸ್, ಇತ್ಯಾದಿಗಳ ಖರ್ಚು-ವೆಚ್ಚಗಳಿಗಾಗಿ ಉಪಯೋಗಿಸುವುದು. ಇದಕ್ಕೆ ಸಂಬಂಧಿಸಿದ ಖರ್ಚು-ವೆಚ್ಚಗಳ ವಿವರಗಳನ್ನು ತಮ್ಮ ತಮ್ಮ ಶಾಲಾ/ಕಾಲೇಜುಗಳ ಮುಖ್ಯಸ್ಥರುಗಳಿಗೆ ಬೇಸಿಗೆ ಶಿಬಿರದ ವರದಿಯೊಂದಿಗೆ ತಿಳಿಸುವುದು. ಅದರ ಒಂದು ಪ್ರತಿಯನ್ನು ನಮ್ಮ ಕಛೇರಿಗೆ ತಪ್ಪದೇ ಕಳುಹಿಸುವುದು.

ಬೇಸಿಗೆ ಶಿಬಿರದಲ್ಲಿ ಭಾಗವಹಿಸುವ ಮಕ್ಕಳು & ದಳನಾಯಕರುಗಳಗೆ (ಶಿಕ್ಷಕರುಗಳಿಗೆ) ವಿಶೇಷ ಪ್ರಮಾಣ ಪತ್ರ ಹಾಗೂ ಸಹಕಾರಗಳನ್ನು ರಾಜ್ಯ ಸಂಸ್ಥೆಯಿಂದ ನೀಡಲಾಗುವುದು. ಸಂಘಟಿಸುವ ಪ್ರತಿ ಬೇಸಿಗೆ ಶಿಬಿರದ ವಿವರಗಳನ್ನು ರಾಜ್ಯ ಸಂಸ್ಥೆಯಿಂದ ಕಳುಹಿಸಲಾಗುವ ಲಿಂಕ್‌ನಲ್ಲಿ https://zfrmz.in/1mGCEP7ZpneZAkg4V3Pk ಭಾಗವಹಿಸಿದವರುಗಳ ವಿವರಗಳನ್ನು ಅಪ್‌ಲೋಡ್ ಮಾಡಿದವರಿಗೆ ಪ್ರಮಾಣ ಪತ್ರ ಮತ್ತು ವಿಶೇಷ ಮಾನ್ಯತೆಯನ್ನು ನೀಡಿ ಪರಿಗಣಿಸಲಾಗುವುದು.

ಸ್ಕೌಟಿಂಗ್-ಗೈಡಿಂಗ್ ಕೌಶಲ್ಯ ಚಟುವಟಿಕೆ ಮತ್ತು ಕಾರ್ಯಕ್ರಮಗಳು ಯಶಸ್ವಿಯಾಗಿ ದಳಗಳಲ್ಲಿ ನಡೆಸುವ ಕ್ರಮಗಳಾಗಿ **ಈ ಬೇಸಿಗೆ ಶಿಬಿರದಲ್ಲಿ ಈ ಕೆಳಕಂಡ ಮುಖ್ಯ ಚಟುವಟಿಕೆಗಳನ್ನು ಸಂಘಟಿಸಲು ತಿಳಿಸಿದೆ**.

- ಸ್ಕೌಟಿಂಗ್ ಮೂಲ ಭೂತ ತತ್ವಗಳು
- ಸ್ಕೌಟ್-ಗೈಡ್ ಪ್ರಾರ್ಥನೆ & ಧ್ವಜಗೀತೆ,
- ಸ್ಕೌಟ್-ಗೈಡ್ ನಿಯಮ, ಪ್ರತಿಜ್ಞೆ, ಸೆಲ್ಯೂಟ್, ಎಡಗೈ ಹಸ್ತಲಾಘವ
- ಸ್ಕೌಟ್-ಗೈಡ್ ಧ್ಯೇಯ, ಗಂಟುಗಳು, ಪ್ರಥಮ ಚಿಕಿತ್ಸೆ ಇತ್ಯಾದಿ ಕೌಶಲ್ಯಗಳ ಚಟುವಟಿಕೆಗಳು
- ಪೇಯಿಂಟಿಂಗ್ & ಡ್ರಾಯಿಂಗ್, ಸಂಗೀತಾ, ಯೋಗ & ಧ್ಯಾನ

- ಅಂಬೇಡ್ಕರ್/ಬಸವ /ಬುದ್ಧ/ಗಾಂಧಿ ಇತ್ಯಾದಿ ಗಣ್ಯರ ಬಗ್ಗೆ ಮಾಹಿತಿ ನೀಡುವಿಕೆ/ನಾಟಕಗಳ ಪ್ರದರ್ಶನ ಇತ್ಯಾದಿ
- ಕರಕುಶಲತೆ, ಮೆಹಂದಿ, ರಂಗೋಲಿ, ವಿವಿಧ ಜಾಗೃತಿ ಜಾಥಾಗಳು
- ಪ್ರಭಾತ್‌ಬೇರಿ, ಹೊರಸಂಚಾರ, ಗೃಹ ಕೈಗಾರಿಕೆಗಳ ಭೇಟಿ
- ಹೊಲಗಳ ಭೇಟಿ, ಕೃಷಿ ಉಪಕರಣಗಳ ಪರಿಚಯ & ಸಾವಯವ ಕೃಷಿ
- ಗೋಶಾಲೆಗಳ ಭೇಟಿ, ಪಶು ಆಹಾರ, ಹಾಲು ಉತ್ಪಾಧನಾ ಪ್ರಕ್ರಿಯೆ ಬಗ್ಗೆ ಮಾಹಿತಿ
- ಗ್ರಾಮೀಣ ವೃತ್ತಿ, ಕೌಶಲ್ಯಗಳ ತಿಳುವಳಿಕೆ
- ಗಿಡ ನೆಡುವಿಕೆ, ಗ್ರಾಮ ಸ್ವಚ್ಛತೆ, ನೀರು ಸಂರಕ್ಷಣಾ ಜಾಗೃತಿ, ನೀರಿನ ಅಪವ್ಯಯದ ಆಟಗಳು
- ವೃದ್ಧಾಶ್ರಮಗಳ ಭೇಟಿ
- ಡೊಳ್ಳು ಕುಣಿತ, ಲಾವಣಿ, ಯಕ್ಷಗಾನ, ಹಳ್ಳಿ ಆಟಗಳು ಮುಂತಾದವುಗಳ ಪರಿಚಯ
- ಗ್ರಾಮಗಳಲ್ಲಿ ಆರೋಗ್ಯ ಜಾಗೃತಿ ಜಾಥಾ, ಕೈ ತೊಳೆಯುವಿಕೆ ಅಭಿಯಾನ, ಇತ್ಯಾದಿ
- ಬಾಲ್ಯ ವಿವಾಹ ವಿರೋಧಿ ಜಾಗೃತಿ, ಶಿಕ್ಷಣದ ಮಹತ್ವ, ಮತದಾನ ಜಾಗೃತಿ, ಇತ್ಯಾದಿ
- ಪ್ರಾಣಿ, ಪಕ್ಷಿಗಳ ಜೀವನದ ಅರಿವು ಪಡೆಯುವಲ್ಲಿ ಕಾರ್ಯ ಚಟುವಟಿಕೆಗಳು
- ಪ್ಲಾಸ್ಟಿಕ್ ಮರುಬಳಕೆ, ಮಾರಾಟ, ತ್ಯಾಜ್ಯಗಳ ಅರಿವು ಮೂಡಿಸುವುದು.

ಈ ಬೇಸಿಗೆ ಶಿಬಿರದ ಅವಧಿಯಲ್ಲಿ ಶಾಲೆಯ ಬಿಸಿ ಊಟವನ್ನು ಉಪಯೋಗಿಸಿಕೊಳ್ಳುವುದು. ತಾಲ್ಲೂಕು ಮತ್ತು ಜಿಲ್ಲಾ ಪದಾಧಿಕಾರಿಗಳು, ದಳನಾಯಕರುಗಳು, ದಾನಿಗಳು, ಜನ ಪ್ರತಿನಿಧಿಗಳು, ಮಠಗಳಿಂದ ಅಥವಾ ಸಂಘ-ಸಂಸ್ಥೆಗಳಿಂದ, ಇನ್ನಾವುದೇ ಭಾರತ್ ಸ್ಕೌಟ್ ಮತ್ತು ಗೈಡ್ ಪ್ರೋತ್ಸಾಹಕರುಗಳಿಂದ ಈ ಬೇಸಿಗೆ ಶಿಬಿರದ ಅವಧಿಯಲ್ಲಿ ಮಕ್ಕಳಿಗೆ ಊಟ, ಲಘು ಉಪಹಾರ, ಹಣ್ಣು, ಬಿಸ್ಕತ್, ಕೇಕ್, ಜ್ಯೂಸ್, ನೀರು ಇನ್ನಿತರೆ ಯಾವುದೇ ಉಪಚಾರಗಳನ್ನು ನೀಡಲು ವಿನಂತಿಸಿ, ಮಕ್ಕಳು ಸಂತೋಷದಿಂದ ಬೇಸಿಗೆ ಶಿಬಿರದಲ್ಲಿ ಭಾಗವಹಿಸಲು ವ್ಯವಸ್ಥೆಗೊಳಿಸಲು ಕೋರಲಾಗಿದೆ.

ಈ ವಿಶೇಷ ಬೇಸಿಗೆ ಶಿಬಿರದ ಸುವ್ಯವಸ್ಥೆ ಬಗ್ಗೆ ತಮ್ಮ ಜಿಲ್ಲೆಯ ಜಿಲ್ಲಾ ಮುಖ್ಯ ಆಯುಕ್ತರ ಮುಖೇನ ತಮ್ಮ ಜಿಲ್ಲೆಯಲ್ಲಿ ಸ್ಥಳೀಯ ಮತ್ತು ಜಿಲ್ಲಾ ಸಂಸ್ಥೆಗಳ ಎಲ್ಲಾ ಪದಾಧಿಕಾರಿಗಳ ಪೂರ್ವ ಸಿದ್ಧತಾ ಸಭೆ ನಡೆಸಿ, ಬೇಸಿಗೆ ಶಿಬಿರದ ಸಂಪೂರ್ಣ ಮಾಹಿತಿ ಮತ್ತು ಅವರ ಅನಿಸಿಕೆ ಅಭಿಪ್ರಾಯಗಳನ್ನು ತೆಗೆದುಕೊಂಡು, ಅವರುಗಳ ಸಲಹೆ ಸಹಕಾರ ಪಡೆದು ಯಶಸ್ವಿಗೊಳಿಸುವಲ್ಲಿ ಆದ್ಯ ಗಮನ ಹರಿಸುವುದು.

ಈ ಬೇಸಿಗೆ ಶಿಬಿರವನ್ನು ಸಂಘಟಿಸುವ ಬಗ್ಗೆ ಹೆಚ್ಚು ಪ್ರಚಾರ ನೀಡುವುದಲ್ಲದೆ, ಉತ್ತಮವಾದಂತಹ ಆಕರ್ಷಣೀಯ ಬ್ಯಾನರ್‌ಗಳನ್ನು ಆಯಾಯಾ ಊರು/ತಾಲ್ಲೂಕು/ಶಾಲೆಗಳ ಪ್ರಮುಖ ಸ್ಥಳಗಳಲ್ಲಿ ಹಾಕಿ, ಹೆಚ್ಚು ಹೆಚ್ಚು ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸುವಂತೆ ಮತ್ತು ಅವರೆಲ್ಲರಿಗೂ ತಿಳಿಸುವಲ್ಲಿ ಆದ್ಯ ಕ್ರಮ ವಹಿಸುವುದು.

ಈ ಶಿಬಿರವನ್ನು ಸಂಘಟಿಸಲು ಅವಶ್ಯಕ ಸಂಪನ್ಮೂಲ ವ್ಯಕ್ತಿಗಳ ಸಹಕಾರಕ್ಕಾಗಿ ತಮ್ಮ ಜಿಲ್ಲೆಯ ಹಿಮಾಲಯ ವೃಕ್ಷಮಣಿಧಾರಕರುಗಳನ್ನು ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳನ್ನು ಮತ್ತು ಬೋಧಿತಾ ವಿಷಯದ ಜ್ಞಾನವುಳ್ಳ ದಳನಾಯಕರುಗಳನ್ನು ಯಾವುದೇ ಗೌರವಧನವಿಲ್ಲದೇ ಶಿಬಿರದ ಸಹಾಯಕರಾಗಿ ಕಾರ್ಯನಿರ್ವಹಿಸುವಲ್ಲಿ ಸೂಕ್ತ ಕ್ರಮ ವಹಿಸಲು ತಿಳಿಸಿದೆ.

ಸದರಿ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸುವಲ್ಲಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳು ಮತ್ತು ಪದಾಧಿಕಾರಿಗಳು, ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿಗಳು ಮತ್ತು ಪದಾಧಿಕಾರಿಗಳು, ಸಕ್ರಿಯವಾಗಿ ಭಾಗವಹಿಸಿ, ಕ್ರಮ ವಹಿಸುವುದು.

ತಮ್ಮ ತಮ್ಮ ವ್ಯಾಪ್ತಿಯ ಬಿ.ಆರ್.ಸಿ, ಸಿ.ಆರ್.ಪಿ, ಶಾಲೆಗಳ ಆಡಳಿತ ಮಂಡಳಿ, ಪ್ರಾಂಶುಪಾಲರು, ಡಿಡಿಪಿಐ(ಆಡಳಿತ)(ಅಭಿವೃದ್ಧಿ), ಬಿ.ಇ.ಓ, ಮಠಾಧೀಶರು, ಜನ ಪ್ರತಿನಿಧಿಗಳು ಮುಂತಾದವರನ್ನು ಭೇಟಿ ಮಾಡಿ, ಶಿಬಿರಗಳಿಗೆ ಆಹ್ವಾನಿಸುವುದು. ಜಿಲ್ಲಾ ಹಾಗೂ ಸ್ಥಳೀಯ ಸಂಸ್ಥೆಯ ಎಲ್ಲಾ ಸದಸ್ಯರುಗಳು ತಮ್ಮ ತಮ್ಮ ಜಿಲ್ಲೆಯ

ಉಪನಿರ್ದೇಶಕರಿಂದ ಬೇಸಿಗೆ ಶಿಬಿರವನ್ನು ನಡೆಸುವಂತೆ ಆದೇಶವನ್ನು ಹೊರಡಿಸಿ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳೊಂದಿಗೆ ಸಮಾಲೋಚಿಸಿ, ಬೇಸಿಗೆ ಶಿಬಿರದ ಅವಧಿಯಲ್ಲಿ ಅವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಸಲಹೆ ಸಹಕಾರ ನೀಡುವಲ್ಲಿ ಪ್ರೋತ್ಸಾಹಿಸುವಂತೆ ವಿನಂತಿಸುವುದು.

ಪ್ರತೀ ಸ್ಥಳೀಯ ಸಂಸ್ಥೆ ಮತ್ತು ಜಿಲ್ಲಾ ಸಂಸ್ಥೆಗಳಲ್ಲಿ ರೋವರ್ಸ್-ರೇಂಜರ್ಸ್‌ಗಳ ಯುವ ಸಮಿತಿಗಳವರ ಅಥವಾ ಸ್ವಯಂಸೇವಕರ ತಂಡವನ್ನು ರಚಿಸಿ ಅವರುಗಳ ಮುಖೇನ ಬೇಸಿಗೆ ಶಿಬಿರದ ಯಶಸ್ವಿ ಕಾರ್ಯಾಚರಣೆಗೆ ಸಹಕಾರ ತೆಗೆದುಕೊಳ್ಳುವುದು. ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಸ್ಕೌಟಿಂಗ್, ಕೌಶಲ್ಯ ಜ್ಞಾನ ಇತ್ಯಾದಿಗಳನ್ನು ಹೆಚ್ಚಿಸಿಕೊಳ್ಳುವಲ್ಲಿ ಯುವಕರಿಗೆ ಸಹಕರಿಸಲು ತಮ್ಮ ಜಿಲ್ಲೆಯ ಎಲ್ಲಾ ನೊಂದಾಯಿತ ದಳಗಳಿಗೆ ಮಾಹಿತಿಯನ್ನು ನೀಡಬೇಕಾಗಿ ಕೋರಲಾಗಿದೆ.

ಈ ವಿಶೇಷ ಬೇಸಿಗೆ ಶಿಬಿರವನ್ನು ಪೂರ್ಣಗೊಳಿಸಿದ ನಂತರ ಆಯಾಯ ದಳನಾಯಕರುಗಳು ಭಾಗವಹಿಸಿದ ಮಕ್ಕಳ ಸಂಖ್ಯೆ ಮತ್ತು ಇತರೆ ವಿವರದೊಂದಿಗೆ ಬೇಸಿಗೆ ಶಿಬಿರದ ವರದಿಯನ್ನು ರಾಜ್ಯ ಸಂಸ್ಥೆಗೆ ಕಳುಹಿಸುವುದು. ಕ್ರಮ ಕೈಗೊಂಡ ಬಗ್ಗೆ ಆಗಿಂದಾಗ್ಯೆ ರಾಜ್ಯ ಸಂಸ್ಥೆಗೆ ವರದಿ ಮಾಡುತ್ತಿರಲು ತಿಳಿಸಿದೆ. ಇದು ಅತ್ಯಂತ ಪ್ರಮುಖ ಮತ್ತು ಆದ್ಯ ಕ್ರಮ ಎಂದು ಪರಿಗಣಿಸಿ, ಬೇಸಿಗೆ ಶಿಬಿರವನ್ನು ಯಶಸ್ವಿಗೊಳಿಸಲು ಕೋರಿದೆ.

ಎ.ಎಸ್.ಓ.ಸಿ, ಡಿ.ಓ.ಟಿ, ಡಿ.ಓ, ಎಸ್.ಜಿ.ವಿ, ಎಸ್.ಜಿ.ಎಗಳು ತಮ್ಮ ಜಿಲ್ಲೆಯ ಎಲ್ಲಾ ಶಾಲೆ/ಕಾಲೇಜುಗಳಲ್ಲಿ ಬೇಸಿಗೆ ಶಿಬಿರವನ್ನು ಪ್ರಾರಂಭಿಸಿ, ನಡೆಸುವಂತೆ ಸೂಕ್ತ ಕ್ರಮ ಕೈಗೊಂಡು, ಯಶಸ್ವಿಗೊಳಿಸಲು ತಿಳಿಸಲಾಗಿದೆ.

ಈ ಬೇಸಿಗೆ ಶಿಬಿರಕ್ಕೆ ಸಂಬಂಧಪಟ್ಟ ಇತರೆ ವಿಷಯಗಳನ್ನು ಮುಂದಿನ ಸುತ್ತೋಲೆಯಲ್ಲಿ ತಿಳಿಸಲಾಗುವುದು.

ಸ್ಕೌಟ್ಸ್-ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಕೆ. ಗಂಗಪ್ಪ ಗೌಡ)
ರಾಜ್ಯ ಕಾರ್ಯದರ್ಶಿ

**ರಾಜ್ಯ ಮುಖ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ**

**ಗೌರವಪೂರ್ವಕವಾಗಿ ಪ್ರತಿಯನ್ನು ಮಾಹಿತಿಗಾಗಿ:**

1. ರಾಜ್ಯದ ಎಲ್ಲಾ ಮಾನ್ಯ ಉಪನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
2. ರಾಜ್ಯದ ಎಲ್ಲಾ ಮಾನ್ಯ ಕ್ಷೇತ್ರಶಿಕ್ಷಣಾಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ

**ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ:**

1. ಎಲ್ಲಾ ಜಿಲ್ಲಾ ಮುಖ್ಯ ಆಯುಕ್ತರು, ಭಾ.ಸ್ಕೌ.ಗೈ, ಕರ್ನಾಟಕ
2. ಎಲ್ಲಾ ಜಿಲ್ಲಾ ಆಯುಕ್ತರು(ಸ್ಕೌ/ಗೈ), ಭಾ.ಸ್ಕೌ.ಗೈ, ಕರ್ನಾಟಕ
3. ಎಲ್ಲಾ ಸ್ಥಳೀಯ ಸಂಸ್ಥೆಗಳ ಕಾರ್ಯದರ್ಶಿಗಳು, ಭಾ.ಸ್ಕೌ.ಗೈ
4. ಎಲ್ಲಾ ಎ.ಎಸ್.ಒ.ಸಿ/ಡಿಒಸಿ/ಡಿಒ/ಎಸ್‌ಜಿವಿ, ಭಾ.ಸ್ಕೌ.ಗೈ
5. ಸಂಬಂಧಪಟ್ಟ ಎಲ್ಲಾ ದಳನಾಯಕರುಗಳು, ಭಾ.ಸ್ಕೌ.ಗೈ
6. ಕಛೇರಿ ಪ್ರತಿ